Demand Nos: 41, 42, 43 and 44

SRI S. BANGARAPPA (Minister for Public Works):- Sir, on the recommendation of the Governor, I beg to move:

"That a sum not exceeding Rs. 26,11,19,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1979 in respect of demand No. 41 Public Works (Excluding Construction)".

Sir, on the recommendation of the Governor, I beg to move.

"That a sum not exceeding Rs. 14,45,81,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1979 in respect of Demand No 42, "Buildings".

Sir on the recommendation of the Governor, I beg to move

'That a sum not exceeding Rs. 31,63,00,000 inclusive of the sum granted 'on account' be granted to the Government to defray the charges which will come in cour e of payment during the financial year ending 31st day of March 1979 in respect of Demand No 43 "Roads and Bridges".

And Sir, on the recommendation of the Governor, I beg to move:

"That a sum not exceeding Rs. 10,95,' 0,000 inclusive of the sum grant ed 'on account' be granten to the Government to defray the charges which will com- in course of payment during the financial year ending 31st day of March 1979 in respect of Demand No: 44 "Public Health Engineering".

The question was proposd

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ ಶ್ರೀಮಾನ್ ಬಸಪ್ಪನವರು ಹೇಳುತ್ತಿದ್ದರು ತಾವು ಈ ಬೇಡಿಕೆಗೆ ೨೦೦ ನಿಮಿಷಗಳನ್ನು ಏನು ಅಲಾಟ್ ಮಾಡಿದ್ದೀರಿ ಅದರಲ್ಲಿ ೧೮೦ ನಿಮಿಷಗಳು ನಮ್ಮ ವಿರೋಧ ಪಕ್ಷದ ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ಆಡಳಿತ ಪಕ್ಷದವರಿಗೆ ೧೦೦ ನಿಮಿಷ ಕೊಡಬೇಕು, ಆ ನೂರು ನಿಮಿಷದಲ್ಲಿ ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಎಷ್ಟು ಸಮಯವನ್ನು ತೆಗೆದುಕೊಳ್ಳುತ್ತಾರೆಯೋ ಅಷ್ಟು ಸಮಯವನ್ನು ರೂಲಿಂಗ್ ಪಾರ್ಟಿಯವರಿಗೆ ಕೊಟ್ಟು ಉತಕ್ಕೆ ಸಮಯದಲ್ಲಿ ಕಳೆದು ಉಳಿದ ಕಾಲವನ್ನು ಮಾನ್ಯ ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು ಎಂದು ಶ್ರೀಮಾನ್ ಬಸಪ್ಪನವರು ಹೇಳುತ್ತಿದ್ದರು. ಮತ್ತು ಈ ದಿವಸ ಬೆಳಿಗ್ಗೆಯಿಂದ ನಾವು ಕುಳಿತುಕೊಂಡಿದ್ದೇವೆ. ಆದ್ದರಿಂದ ಇವೊತ್ತು ೬ ಗಂಟೆಯವರೆಗೂ ಚರ್ಚೆ ಮಾಡಿ ನಾಳೆ ಇದನ್ನು ಮುಗಿಸೋಣ.

ಶ್ರೀ ಬಿ. ಭಾಸ್ಕರಶೆಟ್ಟಿ.—ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಈಗ ನಮ್ಮ ಸಂಖ್ಯಾ ಬಲದ ಆಧಾರದ ಮೇಲೆ ಈ ಚರ್ಚೆಗೆ ಗೊತ್ತು ಮಾಡಿರತಕ್ಕ ಕಾಲದಲ್ಲಿ ನಮ್ಮ ಪಕ್ಷದವರಿಗೆ ೨/೩ ಭಾಗ ಸಮಯ ಸಿಕ್ಕಬೇಕು, ಅದನ್ನು ನಾನು ಒಪ್ಪುತ್ತೇನೆ. ಇದರಲ್ಲಿ ಮಾನ್ಯ ಮಂತ್ರಿಗಳ ಉತ್ತರಕ್ಕೆ ಎಷ್ಟು ಸಮಯ ತೆಗೆದುಕೊಳ್ಳುತ್ತಾರೆಯೋ ಆ ಸಮಯವನ್ನು ನಮ್ಮ ಪಾರ್ಟಿಯ ಸದಸ್ಯರಿಗೆ ಅಲಾಟ್ ಮಾಡಿದ ಸಮಯದಲ್ಲಿ ಕಳೆಯಬೇಕು. ಇದರ ಬಗ್ಗೆ ನಮ್ಮ ಅಭ್ಯಂತರವಿಲ್ಲ.

ಅಧ್ಯಕ್ಷರು.—ನಾಳೆ ಹೇಗಾದರೂ ಮಾಡಿ ಈ ಡಿಮ್ಯಾಂಡ್ ಮುಗಿದು ಹೋಗುವ ಹಾಗೆ ಮಾಡೋಣ. ಆದ್ದರಿಂದ ಈಗ ಶ್ರೀಮಾನ್ ಚೌಡಯ್ಯನವರು ತಮ್ಮ ಭಾಷಣವನ್ನು ಪ್ರಾರಂಭ ಮಾಡಬಹುದು.

† ಶ್ರೀ ಹೆಚ್. ಡಿ. ಚೌಡಯ್ಯ (ಕೆರಗೋಡು).—ಸನ್ಮಾನ್ಯ ಅಧ್ಯಕ್ಷರೆ. ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಯವರು ಈ ಸದನದ ಮುಂದೆ ಏನೊಂದು ಬೇಡಿಕೆಯನ್ನು ಮಂಡಿಸಿದ್ದಾರೆ ಇದು ಸಾರ್ವಜನಿಕರ ಹಿತದೃಷ್ಟಿಯಿಂದ ಬಹಳ ಪ್ರಿಯವಾದ ಬೇಡಿಕೆ. ಅದರಲ್ಲೂ ರೈತನ ಹಿತದೃಷ್ಟಿಯಿಂದ ನೋಡಿದರೆ ಇನ್ನೂ ಹೆಚ್ಚಿನದು, ಇಂಥ ಮಹತ್ತರವಾದ ಬೇಡಿಕೆಗೆ ಸರ್ಕಾರದವರು ಒದಗಿಸಿರುವ ಹಣವನ್ನು ನೋಡಿದರೆ ಬಹುಶಃ ಇದು ಯಾತಕ್ಕೂ ಸಾಲದು ಎಂಬುದನ್ನು ಈ ಸಂದರ್ಭದಲ್ಲಿ ನಾನು ಬಹಳ ವ್ಯಸನದಿಂದ ಹೇಳಬೇಕಾಗಿದೆ. ಈ ಕಾರಣದಿಂದಾಗಿ ಈ ಬೇಡಿಕೆಯನ್ನು ಅತಿ ತೀವ್ರವಾಗಿ ವಿರೋಧಿಸಿ ಕೆಲವಾರು ಸಲಹೆಗಳನ್ನು ಕೊಡುವುದಕ್ಕೆ ಇಚ್ಛಿಸಿದ್ದೇನೆ.

ಸ್ವಾಮಿ, ಈ ಇಲಾಖೆಯವರೇ ಕೊಟ್ಟಿರತಕ್ಕಂಥ ಅಂಕಿ ಅಂಶಗಳ ಪ್ರಕಾರ ನಮ್ಮ ರಾಜ್ಯದಲ್ಲಿರತಕ್ಕಂಥ ರಸ್ತೆಗಳನ್ನು ಒಟ್ಟು ೫ ಭಾಗಗಳಾಗಿ ವಿಂಗಡಿಸಿದ್ದಾರೆ. ಅವು ಯಾವುವೆಂದರೆ (೧) ನ್ಯಾಷನಲ್ ಹೈವೇ (೨) ಸ್ಟೇಟ್ ಹೈವೇ (೩) ಮೇಜರ್ ಡಿಸ್ಟ್ರಿಕ್ಟ್ ರೋಡ್ (೪) ಆದರ್ ಡಿಸ್ಟ್ರಿಕ್ಟ್ ರೋಡ್ಸ್ (೫) ವಿಲೇಜ್ ರೋಡ್ಸ್ ಎಂದು, ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿ ಹೇಳುವುದಾದರೆ ರೂರಲ್ ರೋಡ್ಸ್ ಎಂದು ಹೇಳಿದ್ದಾರೆ. ಇದರ ಒಟ್ಟು ಉದ್ದ ೬೧,೧೦೯ ಕಿಲೋಮೀಟರ್‌ಗಳು ಎಂಬುದು ಗೊತ್ತಾಗುತ್ತಿದೆ. ಮಾನ್ಯ ಸದಸ್ಯರಿಗೇ ಗೊತ್ತಿರುವಂತೆ ಕಳೆದ ೧೦-೧೫ ವರ್ಷಗಳಿಂದ ರಾಜ್ಯದಲ್ಲಿ ಬರಗಾಲ ಬಂದಾಗ ರಿಲೀಫ್ ವರ್ಕುಗಾರರಿಗಳನ್ನು ಕೈಗೊಂಡಿದ್ದಾರೆ, ಮತ್ತು ಆರ್.ಸಿ. ರೋಡ್ಸ್ ಎಂದು ಸ ವಿರಾರು ಮೈಲಿಗಳ ರಸ್ತೆಗಳನ್ನು ಮಾಡಿಸಿದ್ದಾರೆ; ಇದು ಸಂತೋಷದ ವಿಷಯ. ಆದರೆ ರಾಜ್ಯದಲ್ಲಿ ಕಳೆದ ೩೦ ವರ್ಷಗಳಿಂದ ಅದರಲ್ಲೂ ಇತ್ತೀಚೆಗೆ ೨೦ ವರ್ಷಗಳಿಂದ ಈ ರಸ್ತೆ ಕಾರ್ಯಕ್ರಮ ಇನ್ನೂ ಹೆಚ್ಚು ಹೆಚ್ಚು ಆಗಿದೆ. ರಸ್ತೆಗಳ ಉದ್ದವನ್ನು ತೆಗೆದುಕೊಂಡರೆ ಹಿಚ್ಚಿನ ಪ್ರಗತಿಯಾಗಿದೆ. ಆದರೆ ಆ ರಸ್ತೆಗಳ ದುರಸ್ತಿ ಕಾರ್ಯವನ್ನು ನೋಡಿದರೆ ಬಹುಶಃ ನಾವೆಲ್ಲರೂ ತಲೆತಗ್ಗಿಸಬೇಕಾಗುತ್ತದೆ. ನಾನು ಮಾನ್ಯ ಅಧ್ಯಕ್ಷರ ಮೂಲಕ ಈ ಸದನಕ್ಕೆ ಒಂದು ವಿನಂತಿ ಮಾಡಿಕೊಳ್ಳುತ್ತೇನೆ, ಇದು ನಮ್ಮ ಹಳ್ಳಿಗಳ ಕಡೆಯಲ್ಲಿ ಹೇಳುವ ಮಾತು. ಏನೆಂದರೆ, ಈ ಹಾಳಾದ ರಸ್ತೆಯಲ್ಲಿ ಕಬ್ಬಿನ ಗಾಡಿಯನ್ನು ಹೊಡೆಯುವುದಕ್ಕಾಗುವುದಿಲ್ಲ, ಹೊಲಗಳಿಗೆ ಗೊಬ್ಬರ ಸಾಗಿಸುವುದಕ್ಕಾಗುವುದಿಲ್ಲ, ಬೆಲ್ಲವ ಲಾರಿಗಳೂ ಬರುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಇದು ಅಲ್ಲಿ ಪ್ರತಿಯೊಬ್ಬರ ಮನೆಮಾತಾಗಿದೆ, ನಮ್ಮ ಮಂಡ್ಯ ಜಿಲ್ಲೆಯಲ್ಲಿ ಸುಮಾರು ೩೦೦೦ ಕಿಲೋಮೀಟರ್‌ಗಿಂತ ಹೆಚ್ಚಿನ ರಸ್ತೆ ಇದೆ. ಈ ರಸ್ತೆಗಳ ದುರಸ್ತಿ ನೋಡಿದರೆ ಅಲ್ಲಿ ಸ್ಕೂಟರ್‌ಗಳಾಗಲಿ, ಸೈಕಲ್‌ಗಳಾಗಲಿ, ಗಾಡಿಗಳಾಗಲಿ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಅಂಥ ಒಂದು ದುಃಸ್ಥಿತಿ ಇದೆ. ನಿಮ್ಮ ಇಂಜಿನಿಯರುಗಳು ಇದನ್ನು ನೋಡಿ ಮರುಕ ಪಟ್ಟಿದ್ದಾರೆ. ಅವರು ಏನು ಹೇಳುತ್ತಾರೆ ನಮಗೆ ಸಾಕಷ್ಟು ಹಣ ಕೊಟ್ಟಿಲ್ಲ. ಕೊಟ್ಟಿದ್ದರೆ ನಾವು ರಿಪೇರಿ ಮಾಡಿಸುತ್ತಿದ್ದೆವು ಎಂದು. ಆ ರಸ್ತೆಗಳ ಮಧ್ಯದಲ್ಲಿ ರಿಡ್ಜ್ ಬಂದಿದೆ. ಅಂದರೆ ಗಾಡಿಗಳು ಓಡಾಡಿ ಆ ಕಡೆ ಈ ಕಡೆ ಆವೆದು ಮಧ್ಯದಲ್ಲಿ ಉಬ್ಬು ಆಗಿದೆ. ಇದರ ಮೇಲೆ ಲಾರಿಗಳಾಗಲಿ, ಕಾರ್‌ಗಳಾಗಲಿ, ಕೊನೆಗೆ ಎತ್ತಿನ ಗಾಡಿಗಳೂ ಕೂಡ ಹೋಗುವುದಕ್ಕಾಗುವುದಿಲ್ಲ. ಇದು ಬಹಳ ಶೋಚನೀಯವಾದ ವಿಚಾರ, ಈ ರಸ್ತೆಗಳ ದುರಸ್ತಿಗೋಸ್ಕರ ಸರ್ಕಾರದವರು ಪ್ರತಿ ವರ್ಷವೂ ಎಕ್ಸ್‌ಪರ್ಟ್ಸ್ ಕಮಿಟಿ ಮಾಡಿ ಆ ಕಮಿಟಿಯ ತಜ್ಞರ ಸಲಹೆ ಪ್ರಕಾರ ಇಂಥಿಂಥ ದರ್ಜೆಯ ರಸ್ತೆಗಳಿಗೆ ಒಂದು ಕಿಲೋಮೀಟರ್‌ಗೆ ಇಂತಿಷ್ಟು ದುಡ್ಡು ಖರ್ಚಾಗುತ್ತದೆಂದು ಲೆಕ್ಕ ಹಾಕುತ್ತಾರೆ. ನ್ಯಾಷನಲ್ ಹೈವೇಗೆ ನಮ್ಮ ರಾಜ್ಯ ಸರ್ಕಾರದವರು ಒಂದು ಪೈಸೆಯನ್ನೂ ಖರ್ಚು ಮಾಡುವುದಿಲ್ಲ. ಅದಕ್ಕೆ ತಗಲುವ ಖರ್ಚನ್ನೆಲ್ಲಾ ಕೇಂದ್ರ ಸರ್ಕಾರದವರೇ ಕೊಡುತ್ತಾರೆ. ಸ್ಟೇಟ್ ಹೈವೇಗೆ ಒಂದು ಕಿಲೋಮೀಟರ್‌ಗೆ ದುರಸ್ತಿ ಖರ್ಚಿಗಾಗಿ ೪,೫೦೦ ರೂಪಾಯಿಗಳು ಎಂದು ಕೊಟ್ಟಿದ್ದಾರೆ. ಮೇಜರ್ ಡಿಸ್ಟ್ರಿಕ್ಟ್ ರೋಡ್ಸ್‌ಗೆ ೩,೫೦೦ ರೂಪಾಯಿ. ಆದರೆ ಡಿಸ್ಟ್ರಿಕ್ಟ್ ರೋಡ್ಸ್‌ಗೆ ೨೦೦೦ ರೂಪಾಯಿ, ವಿಲೇಜ್ ರೋಡ್ಸ್ ಒಂದು ಕಿಲೊ ಮೀಟರ್‌ಗೆ ೧೦೦೦ ರೂಪಾಯಿ ಎಂದು ಹೇಳಿದ್ದಾರೆ. ಇದನ್ನು ಸ್ಥಳೀಯ ಇಂಜಿನಿಯರ್‌ಗಳ ಜೊತೆಯಲ್ಲಿ ಅಂದರೆ ಜಿಲ್ಲಾ ಅಭಿವೃದ್ಧಿ ಮಂಡಲಿಯಲ್ಲಿ ಚರ್ಚೆ ಮಾಡುವಾಗ ಸರ್ಕಾರದವರು ಈ ರಸ್ತೆಗಳ ದುರಸ್ತಿಗಾಗಿ ಒದಗಿಸಿರುವ ಹಣ ಏನೇನೂ ಸಾಲದು ಎಂಬುದು ಗೊತ್ತಾಗುತ್ತದೆ. ಸ್ವಾಮಿ, ನನ್ನ ಜಿಲ್ಲೆಯಾದ ಮಂಡ್ಯ ಜಿಲ್ಲೆ ಬಗ್ಗೆ ಹೇಳುವುದಾದರೆ ಕಳೆದ ೭-೮ ವರ್ಷಗಳು

ದಲೂ ಕೆಲವು ರಸ್ತೆಗಳಿಗೆ ಜಲ್ಲಿಯನ್ನೂ ಕೂಡ ಕಲೆಕ್ಟ್ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಈ ಮಾತನ್ನು ಬಹಳ ವ್ಯಥೆಯಿಂದ ಹೇಳಬೇಕಾಗಿದೆ. ತಮಗೆ ಈ ಸಂದರ್ಭದಲ್ಲಿ ಒಂದು ಮಾತು ಹೇಳುವುದಾದರೆ, ನಮ್ಮ ಜಿಲ್ಲೆಯ ರೈತರು ರಸ್ತೆಗಳ ದುಸ್ಥಿತಿಯನ್ನು ನೋಡಿ ಈ ಸರ್ಕಾರದ ವಿರುದ್ಧ ನಾವು ಕೋರ್ಟಿಗೆ ಏತಕ್ಕೆ ಹೋಗಬಾರದು ಎನ್ನುವ ಮಟ್ಟಕ್ಕೆ ಹೋಗಿದ್ದಾರೆ. ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ ಆ ರೈತರು ಕೋರ್ಟಿಗೆ ಹೋಗುವ ಮಟ್ಟಕ್ಕೆ ಅವಕಾಶವನ್ನು ಕೊಡಬೇಡಿ. ಸ್ವಾಮಿ, ಮಂಡ್ಯ ಜಿಲ್ಲೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಮಂಡ್ಯ ಡಿವಿಜನ್ ವಿ. ಸಿ. ಡಿವಿಜನ್, ಮತ್ತು ಕೃಷ್ಣರಾಜಸಾಗರ ಡಿವಿಜನ್ ಎಂದು ೩ ಭಾಗಗಳಾಗಿ ಮಾಡಿದ್ದಾರೆ. ಈ ೩ ಡಿವಿಜನ್‌ಗಳಲ್ಲಿ ೩ ಸಕ್ಕರೆ ಕಾರ್ಖಾನೆಗಳಿವೆ. ಅಂದರೆ ಈ ಕಾರ್ಖಾನೆಗಳಿಗೆ ಕಬ್ಬನ್ನು ಸಾಗಿಸಬೆ ಕಾದರೆ, ರೈತನ ವ್ಯವಸಾಯದ ಉಪಕರಣಗಳನ್ನು ಸಾಗಿಸುವುದಕ್ಕೆ ಬಹಳ ತೊಂದರೆಯಾಗಿದೆ. ರೈತನ ಸ್ಥಿತಿ ಇವತ್ತು ಅಧೋಗತಿಗೆ ಇಳಿದಿವೆ. ಮಾನ್ಯ ಮಂತ್ರಿಗಳು ಒಂದು ಒಳ್ಳೆಯ ಕೆಲಸ ಏನು ಮಾಡಿದ್ದಾರೆಂದರೆ, ಕಳೆದ ಒಂದು-ಒಂದೂವರೆ ತಿಂಗಳಿಂದ ಈಚೆಗೆ ಪ್ರತಿಯೊಬ್ಬ ಮಾನ್ಯ ಸದಸ್ಯರಿಗೂ ಪತ್ರಗಳನ್ನು ಬರೆದು ಅವರವರ ತಾಲ್ಲೂಕಿನಲ್ಲಿ ರಸ್ತೆ ದುರಸ್ತಿಗೋಸ್ಕರ ೫ ಕಿಲೋಮೀಟರ್‌ನೊಳಗಿನತಕ್ಕ ರಸ್ತೆಗಳನ್ನು ಸೂಚಿಸಿ ಎಂದು ಹೇಳಿದ್ದಾರೆ. ಮತ್ತು ಪ್ರತಿಯೊಂದು ತಾಲ್ಲೂಕಿಗೆ ೧ ಲಕ್ಷ ರೂಪಾಯಿಯೊಳಗಿರುವಂತೆ ೨-೩ ಸೇತುವೆ ಅಥವಾ ಕಾಲುವೆಗಳನ್ನು ಸೂಚಿಸಬೇಕೆಂದು ಕೇಳಿದ್ದಾರೆ. ಇದು ಹೇಗಿದೆ ಎಂದರೆ 'ರಾವಣನ ಹೊಟ್ಟೆಗೆ ಅರೆ ಕಾಸಿನ ಪಜ್ಜಿಗೆ'' ಎನ್ನುವಂತಿದೆ. A drop in the Ocean ಅದಂತಾಗಿದೆ. ಮಂಡ್ಯದಲ್ಲಿ ಎರಡೂವರೆ ಸಾವಿರ ಕಿಲೋಮೀಟರ್ ಉದ್ದದ ರಸ್ತೆಗಳಿರುವಾಗ ತಾವು ೫ ಕಿಲೋಮೀಟರ್‌ನೊಳಗಿರುವ ರಸ್ತೆಗಳನ್ನು ಸೂಚಿಸಿ ಎಂದು ಕೇಳಿದ್ದೀರಿ ಇದರಿಂದ ಏನು ಪ್ರಯೋಜನ ಎಂಬುದನ್ನು ತಾವೇ ಯೋಚನೆ ಮಾಡಬೇಕು, ನಾನು ವೈಯಕ್ತಿಕವಾಗಿ ಹೇಳುವುದಾದರೆ ಈ ರಸ್ತೆಗಳ ವಿಚಾರದಲ್ಲಿ ಮಾನ್ಯ ಮಂತ್ರಿಗಳಿಗೆ ಬಹಳ ಕಾಳಜಿ ಇದೇ ಆದರೆ ಡಿಮ್ಯಾಂಡ್ ನಂಬರ್ ೪೩ರಲ್ಲಿ ರೋಡ್ಸ್ ಮತ್ತು ಬ್ರಿಡ್ಜಸ್‌ಗೋಸ್ಕರವಾಗಿ ೩೧ ಕೋಟಿ ೬೮ ಲಕ್ಷ ರೂಪಾಯಿಗಳನ್ನು ಏನು ಒದಗಿಸಿದ್ದಾರೆ ಇದು ಯಾತಕ್ಕೂ ಸಾಲುವುದಿಲ್ಲ ಎನ್ನುವ ಮಾತನ್ನು ಹೇಳಬಯಸುತ್ತೇನೆ.

೬-೦೦ ಪಿ.ಎಂ.

ಈ ಸಂದರ್ಭದಲ್ಲಿ ಹಣಕಾಸಿನ ಮಂತ್ರಿಗಳು ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಸನ್ಮಾನ್ಯ ಮುಖ್ಯ ಮಂತ್ರಿಗಳಲ್ಲಿ, ಸನ್ಮಾನ್ಯ ಆರ್ಥಿಕ ಮಂತ್ರಿಗಳಲ್ಲಿ ಹಾಗೂ ಇಡೀ ಮಂತ್ರಿಮಂಡಲ ಸದಸ್ಯರಲ್ಲಿ ನನ್ನ ಕಳಕಳಿಯ ಮನವಿ ಏನು ಎಂದರೆ, ಈ ಡಿಮ್ಯಾಂಡ್‌ಗೆ ಳಿಸಿ ಕೋಟಿ ರೂಪಾಯಿಗಳನ್ನು ಏನು ಒದಗಿಸಿದ್ದಾರೆ ಅದು ಸಾಲದು. ಕೊನೆಯ ಪಕ್ಷ ಒಂದು ನೂರು ಕೋಟಿ ರೂಪಾಯಿಗಳನ್ನಾದರೂ ಇದಕ್ಕೆ ಒದಗಿಸಬೇಕಾಗುತ್ತದೆ ಎಂದು ನಾನು ಹೇಳುತ್ತೇನೆ. ರೋಡುಗಳು ಮತ್ತು ಸೇತುವೆಗಳಿಗೆ ಸುಮಾರು ೩೧ ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಇದು ನೂರಕ್ಕೆ ಮೂರು ಭಾಗದಷ್ಟು ರಸ್ತೆಗಳನ್ನು ಮತ್ತು ಸೇತುವೆಗಳನ್ನು ದುರಸ್ತಿಪಡಿಸುವುದಕ್ಕೆ ಮಾತ್ರ ಸಾಧ್ಯವಾಗುತ್ತದೆ. ಆದರೆ ಇದಕ್ಕೂ ಇನ್ನೂ ಹೆಚ್ಚಿನ ಹಣವನ್ನು ಒದಗಿಸಿ, ರಾಜ್ಯದಲ್ಲಿ ರಸ್ತೆಗಳನ್ನು ಸರಿಯಾದ ರೀತಿಯಲ್ಲಿಡುವುದಕ್ಕೆ ಈ ಕೆಲಸಗಳನ್ನು ತಾವು ಮಾಡಬೇಕು ಎಂದು ನಾನು ಕಳಕಳಿಯಿಂದ ತಮ್ಮನ್ನು ಪ್ರಾರ್ಥಿಸುತ್ತೇನೆ.

ಸ್ವಾಮಿ, ನಮ್ಮ ಮಂಡ್ಯ ಜಿಲ್ಲೆಯಲ್ಲಿ, ಸಕ್ಕರೆ ಕಾರ್ಖಾನೆಗೆ ಸಪ್ಲೈ ಮಾಡತಕ್ಕ ಪ್ರತಿಯೊಂದು ಟನ್ ಕಬ್ಬಿಗೂ ಹಿಂದೆ ೬ರಿಂದ ೧೦ ರೂಪಾಯಿಗಳ ಪರ್ಚೇಸ್ ಟ್ಯಾಕ್ಸನ್ನು ಹಿಡಿಯುತ್ತಿದ್ದರು. ಇದು ಇವತ್ತಿನದಿವಸ ೧೬ ರೂಪಾಯಿಗಳವರೆಗೂ ಹೋಗಿದೆ. ಈ ಹಣವನ್ನು ಜನರಲ್ ಫೂಲ್‌ನಲ್ಲಿ ತೆಗೆದು ಕೊಂಡಿದ್ದಾರೆ ಈ ಹಣವನ್ನು ಸರ್ಕಾರದವರು ಸಕ್ಕರೆ ಕಾರ್ಖಾನೆಯವರಿಗೆ ಕೊಡುತ್ತಿದ್ದರು. ಅದಾದ ಮೇಲೆ ಷುಗರ್‌ಕೇನ್ ಸೆಸ್‌ಫಂಡ್ ಎಂದು ಮಾಡಿದರು. ಈ ವಿಶ್ವೇಶ್ವರಯ್ಯ ನಾಲಾ ಪ್ರದೇಶದಲ್ಲಿ ಸೆಸ್‌ಫಂಡ್ ಎಂದು ಮಾಡಿ ಅದಕ್ಕೆ ಸಾಕಷ್ಟು ಸಿಬ್ಬಂದಿಯನ್ನು ಇಟ್ಟರು. ಆದರೆ ರಸ್ತೆಗಳು ಮಾತ್ರ ಸರಿಯಾದ ರೀತಿಯಲ್ಲಿ ಆಗಲಿಲ್ಲ. ಆದ್ದರಿಂದ ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುವುದು ಏನೆಂದರೆ, ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳಿರುವ ಪ್ರದೇಶಗಳಲ್ಲಿ ಕಲೆಕ್ಟ್ ಆಗತಕ್ಕ ಪರ್ಚೇಸ್ ಟ್ಯಾಕ್ಸ್ ಏನು ಇದೆ, ಅದನ್ನು ಪ್ರತ್ಯೇಕವ ದಂಥ ಒಂದು ನಿಧಿಯನ್ನು ಮಾಡಿಟ್ಟು, ಆ ಪ್ರದೇಶದ ಸರ್ವತೋಮುಖವಾದ ಅಭಿವೃದ್ಧಿಗೆ ಉಪಯೋಗಿಸತಕ್ಕ ಒಂದು ಅವಕಾಶವನ್ನು ತಾವು

ಮಾಡಿಕೊಡಬೇಕು. ಕೇವಲ ದುರಸ್ತಿ ಕಾರ್ಯಗಳು ಮಾತ್ರವಲ್ಲ, ವ್ಯವಸಾಯಕ್ಕೆ ಸಂಬಂಧಪಟ್ಟ ಡೆವಲಪ್‌ಮೆಂಟ್ ಮತ್ತು ರೀಸರ್ಚ್ ಎರಡೂ ಕೂಡ ಕೆಲಸಗಳು ಆಗಬೇಕು. ಇದನ್ನು ಮಾನ್ಯ ಮಂತ್ರಿಗಳು ಪುನರ್‌ಯೋಚನೆ ಮಾಡಬೇಕು ಎಂದು ನಾನು ಕಳಕಳಿಯಿಂದ ನಾನು ಪ್ರಾರ್ಥನೆಮಾಡಿಕೊಳ್ಳುತ್ತೇನೆ.

ಸ್ವಾಮಿ, ತಾವು ಇಲಾಖೆಗೆ ಹಣವನ್ನು ಏನು ಒದಗಿಸಿದ್ದೀರಿ ಅದರಬಹುಶಃ ವರ್ಕ್ಸ್ ಚಾರ್ಜ್ ಸಿಬ್ಬಂದಿಯ ಸಂಬಳಕ್ಕೆ ಹೋಗುತ್ತದೆ. ಇನ್ನು ಉಳಿಯತಕ್ಕ ಹಣ ಬಹಳ ಕಡಿಮೆ ಎಂದು ನಾನು ಈ ಸಂದರ್ಭದಲ್ಲಿ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ರಸ್ತೆಯ ಕೆಲಸದ ಬಗ್ಗೆ ಹೇಳುವುದಾದರೆ, ಹೊಸದಾಗಿ ನಮ್ಮ ಹಳ್ಳಿಗಳ ಕಡೆ ರಸ್ತೆಗಳನ್ನು ಮಾಡಬೇಕು ಎಂದರೆ ಬಹಳ ಕಷ್ಟವಾಗಿದೆ. ಯಾವುದಾದರೂ ಒಂದು ಹೊಲಕ್ಕೆ, ಗದ್ದೆಗೆ ಹೋಗಬೇಕಾದರೂ ಅದು ಸಾರ್ವಜನಿಕ ರಸ್ತೆಯಾಗಿದ್ದರೂ ಕೂಡ ಕೇವಲ ೩–೪ ಫರ್ಲಾಂಗ್ ರಸ್ತೆಯಾಗಿದ್ದರೂ ಕೂಡ, ಇಲಾಖೆಯ ಅಧಿಕಾರಿಗಳು ಇದಕ್ಕೆ ಪ್ರಾವಿಷನ್ ಇಲ್ಲ, ಅವಕಾಶ ಇಲ್ಲ ಹಣ ಇಲ್ಲ ಎಂದು ಹೇಳುತ್ತಿರುತ್ತಾರೆ. ಈ ಸಂದರ್ಭದಲ್ಲಿ ಬಹಳ ಸಂಕಟದಿಂದ ಒಂದು ಮಾತನ್ನು ಹೇಳಬೇಕಾಗಿದೆ. ಇಷ್ಟು ಸಣ್ಣ ಒಂದು ಕೆಲಸಕ್ಕೂ ಹಣ ಇಲ್ಲ, ಅವಕಾಶ ಇಲ್ಲ ಎಂದು ಹೇಳುವುದಾದರೆ ಇದು ಎಂಥ ನಾಚಿಕೆಗೇಡಿನ ವಿಷಯ ಎಂದು ನಾನಾದರೂ ಮಾನ್ಯ ಮಂತ್ರಿಗಳಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ವಿಷಯದಲ್ಲಿ ತಾವು ಯಾವುದಾದರೂ ಒಂದು ಯೋಜನೆಯನ್ನು ಕೈಗೊಳ್ಳಬೇಕು. ೫–೬ ಕಿಲೋಮೀಟರ್ ಉದ್ದ ರಸ್ತೆಗೂ ಕೆಲಸ ಮಾಡುವುದಕ್ಕೂ ಕಷ್ಟವಾಗಿದೆ. ಈ ರಸ್ತೆಗಳು ನಮ್ಮ ನೀರಾವರಿ ಪ್ರದೇಶದಲ್ಲಿ ಬಹಳ ಮುಖ್ಯವಾಗಿ ಬೇಕಾಗುತ್ತವೆ. ಇಂಥ ರಸ್ತೆಗಳನ್ನು ಮಾಡುವುದರಿಂದ, ಕಬ್ಬನ್ನು ಗಾಡಿಗಳ ಮೂಲಕ ಸಾಗಿಸುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಸರ್ಕಾರದವರು ಈ ಸಣ್ಣ ಸಣ್ಣ ರಸ್ತೆಗಳ ಕೆಲಸಗಳನ್ನು ಮಾಡಿಕೊಡದೇ ಹೋದರೆ ಬಹುಶಃ ಸರ್ಕಾರದವರು ರೈತರಿಗೆ ಎಷ್ಟರಮಟ್ಟಿನ ಸೇವೆಯನ್ನು ಮಾಡುತ್ತಾರೆನ್ನುವದು ನಾವು ಯೋಚನೆ ಮಾಡಬೇಕಾಗುತ್ತದೆ.

ಇನ್ನು ಸೇತುವೆಗಳ ಬಗ್ಗೆ ಹೇಳುವುದಾದರೆ, ನಮ್ಮ ರಾಜ್ಯದಲ್ಲಿ ಇದರ ಬಗ್ಗೆ ಏನು ಒಂದು ಕಾರ್ಯಕ್ರಮ ಇದೆ ಅದು ಕುಂಠಿತವಾಗಿದೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಹಿಂದೆ ಬೇಕಾದಷ್ಟು ಸೇತುವೆಗಳನ್ನು ಮಾಡಿದರು. ಮೇಜರ್ ಡಿಸ್ಟ್ರಿಕ್ಟ್‌ರ್ ರೋಡ್ಸ್ ಎಂದು ಮಾಡಿದರು, ವಿಲೇಜ್ ರೋಡ್ಸ್, ಆರ್ ಸಿ. ರೋಡ್ಸ್ ಎಂದು ಮಾಡಿದರು. ಆದರೆ ನಾವು ಹಳ್ಳಿಗಳಿಗೆ ಹೋದಂಥ ಸಂದರ್ಭದಲ್ಲಿ ಇವುಗಳನ್ನು ನೋಡಿದರೆ ಯಾರು ರಸ್ತೆಗಳನ್ನು ಮಾಡಿದರು ಎನ್ನುವುದೇ ಗೊತ್ತಾಗುವುದಿಲ್ಲ. ಯಾರೋಒಬ್ಬ ಅಸಿಸ್ಟೆಂಟ್ ಇಂಜನಿಯರ್ ಇದ್ದರು, ಜೂನಿಯರ್ ಇಂಜನಿಯರ್ ಇದ್ದರು. ತಾಲ್ಲೂಕು ಬೋರ್ಡಿನವರು ಯಾರೋ ಮಾಡಿಸಿದರು. ಇಂಥವರು ಈ ರೋಡುಗಳನ್ನು ಮಾಡಿಸಿದರು ಎನ್ನುವುದೇ ನಮಗೆ ಗೊತ್ತಾಗುವುದಿಲ್ಲ. ಆದರೆ ಮಳೆಗಾಲದಲ್ಲಿ ಮಕ್ಕಳು ಶಾಲೆಗೆ ಹೋಗಬೇಕಾದರೂ ಲೋ ಲೆವೆಲ್ ಕಾಸ್‌ವೇಗಳು ಇಲ್ಲದೆ ಬಹಳ ತೊಂದರೆಗಳು ಆಗಿದೆ. ಎಲ್ಲದಕ್ಕೂ ನಾನು ಮಂತ್ರಿಗಳದು ತಪ್ಪು ಎಂದು ಹೇಳುವುದಿಲ್ಲ. ಆವರು ಈ ಖಾತೆಯನ್ನು ವಹಿಸಿಕೊಂಡಮೇಲೆಸಾಕಷ್ಟು ಹಣ ಇಲ್ಲದೆ. ಇವತ್ತು ಇವರಿಗೆ ಆಸಕ್ತಿ ಇದ್ದರೂ, ಎಷ್ಟರಮಟ್ಟಿಗೆ ಹಳ್ಳಿಗಳಲ್ಲಿ ರಸ್ತೆಗಳ, ಹಾಗೂ ಸೇತುವೆಗಳ ಕೆಲಸಗಳು ಆಗಬೇಕೋ ಅದನ್ನು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯಮಂತ್ರಿಗಳು ಬಂದ ಮೇಲೆ ಆಸಕ್ತಿ ವಹಿಸಿ ಒಂದೊಂದು ತಾಲ್ಲೂಕಿನಲ್ಲಿ ಸುಮಾರು ೫ ಕಿಲೋಮೀಟರ್ ಉದ್ದದ ಸಿಡ ವರ್ಕ್ಸ್‌ಗಳನ್ನು ತೆಗೆದುಕೊಳ್ಳುತ್ತೇವೆ ಯಾವ ರೋಡುಗಳನ್ನು ನಿಮ್ಮ ಕ್ಷೇತ್ರದಲ್ಲಿ ತೆಗೆದುಕೊಳ್ಳಬೇಕು ಎಂದು ಸೂಚನೆಮಾಡಿ ಎಂದು ಎಲ್ಲಾ ಶಾಸಕರನ್ನು ಕೇಳಿದ್ದಾರೆ. ಆದರೆ ಇದು ಖಂಡಿತಾ ಸಾಲದು ಇದಕ್ಕೆ ತಾವು ವ್ಯಾಪಕವಾಗಿ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಎಂದು ನಾನು ಒಂದು ಸಲಹೆಯನ್ನು ಮಾಡುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಬಿಲ್ಡಿಂಗ್ಸ್ ವಿಷಯದಲ್ಲಿ ಹೇಳುವುದಾದರೆ, ಬೆಂಗಳೂರು ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮಲ್ಟಿ ಸ್ಟೋರೀಡ್ ಬಿಲ್ಡಿಂಗ್‌ಗಳು ಇರಬಹುದು ಬೆಂಗಳೂರಿನಲ್ಲಿ ವರ್ಷವರ್ಷ ದೊಡ್ಡ ದೊಡ್ಡ ಬಿಲ್ಡಿಂಗ್‌ಗಳು ಬರುತ್ತಿವೆ, ಇದು ಬಹಳ ಸಂತೋಷ, ನಮ್ಮ ರಾಜ್ಯದ ರಾಜಧಾನಿ ಇಲ್ಲಿಗೆ ಇಂಥ್ಥ ಬಿಲ್ಡಿಂಗ್‌ಗಳು ಬೇಕು ಆದರೆ ನನ್ನ ಸಲಹೆ ಸಾಮಾನ್ಯವಾಗಿ ಜಿಲ್ಲಾ ಕೇಂದ್ರಗಳಲ್ಲಿ ಮತ್ತು ತಾಲ್ಲೂಕು ಕೇಂದ್ರಗಳಲ್ಲಿಯೂ ಇಂಥ ಕಟ್ಟಡಗಳು ಬರಬೇಕು. ಇದು ಒಂದೇ ಕಡೆ ಕೇಂದ್ರಿಕೃತವಾಗಬಾರದು ಎಲ್ಲಾ ಸೌಲಭ್ಯಗಳು, ಎಲ್ಲಾ ಕಡೆಗಳಲ್ಲಿ ದೊರಕುವಂತೆ ಮಾಡಬೇಕಾದ್ದು ಸರ್ಕಾರದ ಕರ್ತವ್ಯ.

ಇದರ ಬಗ್ಗೆ ನಾನು ಮಂಡ್ಯದ ಉದಾಹರಣೆಯನ್ನು ಕೊಡುವುದಾದರೆ, ಇಲ್ಲಿರತಕ್ಕ ಸುಮಾರು ೨೫ ಆಫೀಸುಗಳು ಒಂದೇ ಕಡೇ ಇಲ್ಲ. ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಸುಮಾರು ೭–೮ಆಫೀಸುಗಳು ಇವೆ ಇವುಗಳನ್ನು ಬಿಟ್ಟರೆ ಬೇರೆ ಆಫೀಸುಗಳು ಅಲ್ಲಲ್ಲಿ ಇವೆ. ಒಂದೊಂದು ಮೂಲೆಯಲ್ಲಿಯೂ ಒಂದೊಂದು ಇವೆ. ಒಂದುಕಡೆಯಿಂದ ಇನ್ನೊಂದು ಕಡೆಯ ಆಫೀಸಿಗೆ ರೈತ ಹೋಗ ಬೇಕಾದರೆ ಮತ್ತು ತನ್ನ ಕೆಲಸಗಳನ್ನು ಮಾಡಿಸಿಕೊಳ್ಳಬೇಕಾದರೆ ಸುಮಾರು ನಾಲ್ಕೈದು ದಿವಸಗಳು ಬೇಕಾಗುತ್ತದೆ. ಕಾರಣ ಬೆಂಗಳೂರಿನಲ್ಲಿದ್ದ ಹಾಗೆ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಆಫೀಸು ಗಳನ್ನು ಒಂದೇ ಕಡೆ ಇರತಕ್ಕ ವ್ಯವಸ್ಥೆಯನ್ನು ಮಾನ್ಯ ಮಂತ್ರಿಗಳು ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಉದಾಹರಣೆಗೆ, ಜಿಲ್ಲಾ ಕೇಂದ್ರವಾದ ಮಂಡ್ಯ ತಾಲ್ಲೂಕಿನಲ್ಲಿರತಕ್ಕ ತಹಶೀಲ್ದಾರರ ಕಛೇರಿಗೆ ಇವತ್ತಿನವರಿಗೂ ಕಟ್ಟಡ ಇಲ್ಲ. ಬಹುಶಃ ೧೦–೧೫ ವರ್ಷಗಳ ಹಿಂದೆಯೇ ಜಿಲ್ಲಾಧಿಕಾರಿಗಳ ಕಛೇರಿಯ ಪಕ್ಕದಲ್ಲಿ ನಿವೇಶನವನ್ನು ಗೊತ್ತುಮಾಡಿ, ಅದನ್ನು ಕೊಡಬೇಕೆಂದು ಕೇಳಿದ್ದಾರೆ. ಇದುವರೆಗೆ ಆದರಲ್ಲಿ ಯಾವುದೇ ಒಂದು ಕಾರ್ಯಕ್ರಮವನ್ನು ಇನಿಪಿಯೇಟ್ ಮಾಡಿಲ್ಲ. ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಇನ್ನು ಇಲಾಖೆಯ ಬೇಡಿಕೆಗಳನ್ನು ನಾನುಸುಮಾರು ಒಂದೂವರೆತಿಂಗಳಿಂದ ಓದಿದ್ದೇನೆ ಪುಟವನ್ನು ತಿರುಗಿಸಿ ನೋಡಿದ್ದೇನೆ. ಪ್ರತಿಯೊಂದು ಹೆಡ್ ಆಫ್ ಆಕ್ಂಟಿನಲ್ಲೂ ಕೂಡ ಡಿವಿಜನ್ ವಾರ್, ಸರ್ಕಲ್ ವಾರ್ ಏನು ಹಣದ ವಿತರಣೆ ಮಾಡಿದ್ದೀರಿ ಅದನ್ನು ನೋಡಿದರೆ, ಕೆಲವು ಡಿವಿಜನ್‌ಗಳಿಗೆ ಸರ್ಕಲ್‌ಗಳಿಗಂತೂ ಅಷ್ಟಿಷ್ಟಲ್ಲ ಬಹಳ ದೊಡ್ಡ ಅನ್ಯಾಯ ಮಾಡಿದ್ದೀರಿ ಇದನ್ನು ಇಲಾ ಖೆಯ ಅಧಿಕಾರಿಗಳು ಮಾಡಿದ್ದಾರೋ ಅಥವಾ ಸಂಬಂಧಪಟ್ಟ ಮಂತ್ರಿಗಳು ಮಾಡಿದ್ದಾರೋ, ಎಂಬು ದನ್ನು ನಾನು ಈ ಸಂಧರ್ಭದಲ್ಲಿ ಹೇಳಬಯಸುವುದಿಲ್ಲ. ಆದರೆ ಒಂದು ಮಾತನ್ನು ಹೇಳುತ್ತೇನೆ. ಯಾವುದೇ ಡಿವಿಜನ್ ಆಗಲೀ ಯಾವುದೇ ಸರ್ಕಲ್ ಆಗಲಿ ಸೇತುವೆ ಕಾರ್ಯಕ್ರಮವಾಗಲೀ ಬಿಲ್ಡಿಂಗಿನ ಕಾರ್ಯಕ್ರಮವಾಗಲಿ ಯಾವುದೇ ಒಂದು ಕಾರ್ಯಕ್ರಮವಾದರೂ ಕೂಡ ಒಂದು ನಿಯಮ ಇರಬೇಕು, ಒಂದು ಅಳತೆಗೋಲು ಇರಬೇಕು ಆ ಜಿಲ್ಲೆಯ ಜನಸಂಖ್ಯೆಯಾಗಲೀ, ವಿಸ್ತೀರ್ಣವಾಗಲೀ ಅಥವಾ ಅವಶ್ಯ ಕತೆಯಮೇಲಾಗಲೀ ಹೀಗೆ ಯಾವುದಾದರೂ ಒಂದು ಬೇಸಿಸ್ ಇಟ್ಟುಕೊಂಡು ತಾವು ಮಾಡಬೇಕು. ಆದರೆ ಇಲ್ಲಿ ಇದಾವುದನ್ನು ನೋಡದೆ ಬಹಳ ಹೆಚ್ಚಿನ ಮಟ್ಟದ ತಾರತಮ್ಯ ಉಂಟಾಗಿದೆ. ಒಂದು ಮಾತು ಹೇಳುವುದಾದರೆ ಯಾವ ಯಾವ ವಿಭಾಗದಲ್ಲಿ, ಯಾವ ಯಾವ ಜಿಲ್ಲೆಯಲ್ಲಿ ಹಾಗೂ ಯಾವ ಯಾವ ಸರ್ಕಲ್‌ನಲ್ಲಿ ಮಂತ್ರಿಗಳ ಪ್ರಭಾವ ಇದೆಯೋ ಆಂಥ ಕಡೆ ಜಾಸ್ತಿ ಸೇರಿಸಿದ್ದೀರಿ. ಮಂಡ್ಯ ಜಿಲ್ಲೆಯಲ್ಲಿ ಸದ್ಯಕ್ಕೆ ಯಾರು ಮಂತ್ರಿಗಳಿಲ್ಲ. ಆದ್ದರಿಂದ ಅದು ಬಹುಶಃ ೧೯ ಜಿಲ್ಲೆಗಳ ಪೈಕಿ ೧೯ನೆಯದೇ ಆಗಿದೆ. ತಾವು ಒಮ್ಮೆ ಬಂದು ಆ ಜಿಲ್ಲೆಯನ್ನು ನೋಡಬೇಕು. ಅಲ್ಲಿ ಏನಾದರೂ ಅತಿಯಾದ ಆಶೆಯನಿಟ್ಟು ಕೊಂಡಿದ್ದರೆ ಅದನ್ನು ಸರಿಪಡಿಸಿ. ಆದ್ದರಿಂದ ಕಳಕಳಿಯಿಂದ ಪ್ರಾರ್ಥಿಸಿಕೊಳ್ಳತಕ್ಕದ್ದೇನೆಂದರೆ, ದಯವಿಟ್ಟು ಈ ರೀತಿಯ ತಾರತಮ್ಯಕ್ಕೆ ಅವಕಾಶ ಕೊಡದೆ ಎಲ್ಲರನ್ನೂ ಕೂಡ ಒಂದೇ ರೀತಿಯಲ್ಲಿ ಕಾಣಬೇಕು ಎಂದು ಇವತ್ತಿನ ದಿವಸ ಲೋಕೋಪಯೋಗಿ ಇಲಾಖೆಯಲ್ಲಿ ಬಹುಮಟ್ಟಿಗೆ ಹಣ ದುರುಪಯೋಗವಾಗುತ್ತಿದೆ ಎಂದು ಎಲ್ಲರೂ ಹೇಳುತ್ತಾರೆ. ಅದು ಹೇಗೇ ಇರಲಿ ಅದನ್ನು ಈಗ ಪ್ರಸ್ತಾಪಿಸುವುದಕ್ಕೆ ಇಚ್ಛೆಪಡುವುದಿಲ್ಲ. ಅನೇಕ ಸೆಮಿನಾರ್‌ಗಳಲ್ಲಿ, ಮೀಟಿಂಗ್‌ಗಳಲ್ಲಿ ಚೀಫ್ ಸೆಕ್ರಟರಿಯವರು, ಪ್ಲಾನಿಂಗ್ ಸೆಕ್ರಟರಿಯವರು, ಡೆವಲಪ್‌ಕಮೀಷನರ್ ಕೂಡ ಅದನ್ನೇ ಹೇಳುತ್ತಿದ್ದಾರಲ್ಲದೆ ಡಿವಿಜನಲ್ ಕಮೀಷನರ್ ಹಾಗೂ ಡೆಪ್ಯೂಟಿ ಕಮೀಷನರ್‌ಗಳ ಕಾನ್‌ಫರೆನ್ಸ್‌ಗಳಲ್ಲೂ ಸಹ ಹೇಳುತ್ತಿದ್ದಾರೆ. ಇನ್ನು, ವರ್ಷದ ಕೊನೆಯಲ್ಲಿ ಮಾಡತಕ್ಕ ರಷ್ ಆಫ್ ಎಕ್ಸ್‌ಪೆಂಡಿಚೆರನ್ನು ಸರ್ಕ್ಯುಲರ್ ಇನ್‌ಸ್ಟ್ರಕ್ಷನ್ ಕೊಟ್ಟು ನಿಲ್ಲಿಸಬೇಕೆಂದು ಹೇಳುತ್ತೇನೆ. ಈ ರೀತಿ ಆಗುವುದನ್ನು ನನ್ನ ಅನುಭವದಲ್ಲೂ ನೋಡಿದ್ದೇನೆ, ಮಾನ್ಯ ಮಂತ್ರಿಗಳೂ ಕೂಡ ನೋಡಿರು ತ್ತಾರೆ ಈ ಬಗ್ಗೆ ಮಾನ್ಯಮಂತ್ರಿಗಳು ಉತ್ತರ ಕೊಡುವಾಗ ದಯವಿಟ್ಟು ಸ್ಪಷ್ಟವಾಗಿ ಹೇಳಬೇಕು. ಕಳೆದ ನಾಲ್ಕಾರು ವರ್ಷಗಳಿಂದ ಒಂದು ವರ್ಷದಲ್ಲಿರತಕ್ಕ ನಾಲ್ಕು ಕ್ವಾರ್ಟರ್‌ಗಳಲ್ಲಿ ಮೊದಲನೇ ಕ್ವಾರ್ಟರ್‌ನಲ್ಲಿ ಎಷ್ಟು ಹಣ ಖರ್ಚಾಗಿದೆ, ಎರಡನೆಯದರಲ್ಲಿ ಎಷ್ಟು ಮೂರನೆಯದರಲ್ಲಿ ಎಷ್ಟು ಹಾಗೂ ನಾಲ್ಕನೆಯದರಲ್ಲಿ ಎಷ್ಟು ಹಣಖರ್ಚಾದೆಗಿ ಎಂದರೆ ಬಹುತೇಕ ಭಾಗ ಖರ್ಚಾಗಿರತಕ್ಕದ್ದು ಕೊನೆಯ ಕ್ವಾರ್ಟರ್‌ನಲ್ಲಿ ಅದರಲ್ಲೂ ಕೊನೇ ತಿಂಗಳಲ್ಲಿ ಕೊನೇ ವಾರದಲ್ಲಿ ಕೊನೇ ಒಂದು ಎರಡು ದಿವಸಗಳಲ್ಲಂತೂ ಆಗಿದೆ. ಇದೆಲ್ಲ ಮಾನ್ಯ ಚನ್ನಬಸಪ್ಪನವರು ಲೋ ಕೋ ಪ ಯೋಗಿ ಸಚಿವರಾಗಿದ್ದಾಗ ಮಾಡಿದ್ದು ಎಂದು ಕಾಣುತ್ತದೆ. ಲಿಮಿಟ್ ಮೀರಿ ಎಕ್ಸ್‌ಪೆಂಡಿಚರ್ ಮಾಡು ವುದು ಒಂದು ಕೆಟ್ಟ ಚಾಳಿಯಾಗಿದೆ. ಒಂದು ಡಿವಿಜನ್ನಿಗೆ ೫೦–ಆಕ್ಷ ರೂಪಾಯಿ ಗ್ರಾಂಟ್ ಕೊಟ್ಟಿದ್ದರೆ. ೬೦ ಲಕ್ಷ ರೂಪಾಯಿ ಎಕ್ಸ್‌ಪೆಂಡಿಚರ್ ಮಾಡಿರುತ್ತಾರೆ. ಇದರಲ್ಲಿ ಒಂದು ಫೈನಾನ್ಸಿಯಲ್ ಡಿಸಿಪ್ಲೀನ್

ಇರಲಿಎ ಂದು ಎಲ್.ಓ.ಸಿ. ಸಿಸ್ಟಂನ್ನು ಇಂಟ್ರಡ್ಯೂಸ್ ಮಾಡಲಾಗಿದೆ. ಒಟ್ಟಿನಲ್ಲಿ ಮಾನ್ಯ ಬಂಗಾರಪ್ಪ ನವರಕ ಲದಲ್ಲಾದರೂ ಕೂಡ ವರ್ಷದ ಕೊನೆಯಲ್ಲಿ ಆಗತಕ್ಕ ರಷ್ ಆಫ್ ಎಕ್ಸ್‌ಪೆಂಡಿಚರ್ ಮಾಡುವು ದನು ಕಡಿಮೆ ಮಾಡತಕ್ಕ ಒಂದು ಯೋಜನೆಯನ್ನು ದಯವಿಟ್ಟು ಮಾಡಿ ಎಂದು ಸಲಹೆ ಮಾಡುತ್ತೇನೆ. ಒಂಧ ು ವೇಳೆ ಇದನ್ನು ಮಾಡದಿದ್ದರೆ ಕರಪ್‌ಷನ್ ಭ್ರಷ್ಟಾಚಾರ ಗಗನಕ್ಕೆ ಮುಟ್ಟುವುದಕ್ಕೆ ಅವಕಾಶವಾಗು ತ್ತದೆ ತತ್ಸಂಬಂಧವಾಗಿ ಈ ಇಲಾಖೆಯೊಡನೆ ಹಣಕಾಸಿನ ಇಲಾಖೆಯವರು ಕೂಡ ಸಹಕರಿಸಬೇಕು. ಇವ ತ್ತಿನ ದಿವಸ ಏನಾಗುತ್ತಿದೆ ಎಂದರೆ ತತ್ವ ಹೇಳುವುದಕ್ಕೆ ಬದನೆಕಾಯಿ ತಿನ್ನುವುದಕ್ಕೆ ಎನ್ನುವ ಹಾಗೆ ಹಣ ಕಾಸಿನ ಇಲಾಖೆಯವರೂ ಕೂಡ ಸಮಯಕ್ಕೆ ಸರಿಯಾಗಿ ಹಣವನ್ನು ಬಿಡುಗಡೆ ಮಾಡುವುದಿಲ್ಲ. ಇದರಿಂದ ಬಹಳ ತೊಂದರೆಯಾಗುತ್ತದೆ ಆದ್ದರಿಂದ ಲೋಕೋಪಯೋಗಿ ಇಲಾಖೆಯವರೊಡನೆ ಹಣಕಾಸಿನ ಇಲಾಖೆ ಯವರು ಸಹಕರಿಸಿದರೆ ವರ್ಷದ ಕೊನೆಯಲ್ಲಿ ಆಗತಕ್ಕ ರಷ್ ಆಫ್ ಎಕ್ಸ್‌ಪೆಂಡಿಚರನ್ನು ಅವಾಯಿಡ್ ಮಾಡುವುದರಜೊತೆಗೆ ಅಲ್ಲಿ ನಡೆಯತಕ್ಕ ಭ್ರಷ್ಟಾಚಾರವನ್ನು ಕೂಡ ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆಂಬ ಸಲಹೆಯನ್ನು ಮಾನ್ಯ ಹಣಕಾಸಿನ ಮಂತ್ರಿಗಳಿಗೆ ಈ ಸಂದರ್ಭದಲ್ಲಿ ಕೊಡಬಯಸುತ್ತೇನೆ ಈಗಾಗಲೇ ಮಾನ್ಯ ಅಧ್ಯಕ್ಷರು ಬೆಲ್ ಕಡೆ ನೋಡುತ್ತಿರುವುದರಿಂದ ಹೆಚ್ಚು ಕಾಲ ತೆಗೆದು ಕೊಳ್ಳದೆ, ಈ ಭಾಗದಲ್ಲಿ ಹಾಗೂ ಆ ಭಾಗದಲ್ಲಿ ಇನ್ನೂ ಮಾತನಾಡಲಿರುವ ಮಾನ್ಯ ಸದಸ್ಯರುಗಳು ಇನ್ನು ಏನಾದರೂ ವಿಷಯ ಗಳು ಇದ್ದರೆ ಕವರ್ ಮಾಡುತ್ತಾರೆಂದು ನಂಬಿ ಮತ್ತೊಮ್ಮೆ ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮಾನ್ಯ ಆರ್ಥಿಕ ಮಂತ್ರಿಗಳಲ್ಲಿ ಹಾಗೂ ಉಳಿದೆಲ್ಲ ಮಂತ್ರಿವಲಯದಲ್ಲಿ ಅರಿಕೆ ಮಾಡಿ ಕೊಳ್ಳುವುದೇನೆಂದರೆ, ತಮ್ಮ ಇಲಾಖೆ ಒಂದನ್ನೇ ನೋಡಿದರೆ ಸಾಲದು ಜೊತೆಗೆ ಲೋಕೋಪಯೋಗಿ ಇಲಾಖೆಯ ಕಡೆಗೂ ಕೂಡಗಮನಹರಿಸಬೇಕು, ಸಹಾನುಭೂತಿ ತೋರಿಸಬೇಕು ಹಾಗೂ ಆ ಇಲಾಖೆಗೆ ಹೆಚ್ಚಿನ ಹಣವನ್ನು ಕೊಡಿಸತಕ್ಕ ವ್ಯವಸ್ಥೆಯನ್ನು ಮಾಡಬೇಕು ಎಂದು. ನಾಲ್ಕು ಬೇಡಿಕೆಗಳ ಪೈಕಿ ರಸ್ತೆಗಳು ಸೇತುವೆಗಳು ಏನು ಇವೆ ಆ ಬಾಬಿಗೆ ೧೦೦ ಕೋಟಿ ರೂಪಾಯಿಯನ್ನು ಒದಗಿಸಿದ್ದೇ ಆದರೆ ಸ್ವಲ್ಪಮಟ್ಟಿಗೆ ತೃಪ್ತಿಕರವಾಗಿಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆಂಬ ಮಾತನ್ನು ಹೇಳುತ್ತಾ. ಇಷ್ಟು ವೇಳೆ ಮಾತನಾ ಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಎಸ್.ಎಸ್. ಅರಕೇರಿ.—ಅಜೆಂಡಾದ ಕೊನೆಯಲ್ಲಿ ನನ್ನದೊಂದು ಅರ್ಧ ಗಂಟೆ ಕಾಲದ ಚರ್ಚೆ ಇದೆ.

ಅಧ್ಯಕ್ಷರು—ಈಗ ಮಾನ್ಯ ಮುಖ್ಯಮಂತ್ರಿಗಳಿಲ್ಲದಿರುವುದರಿಂದ ಅದನ್ನು ಇನ್ನೊಂದು ದಿವಸ ತೆಗೆದುಕೊಳ್ಳೋಣ.

ಈಗ ಸಭೆಯು ಎದ್ದು ನಾಳೆ ಬೆಳಿಗೆ ೯–೦೦ ಗಂಟೆಗೆ ಸೇರುವುದು.

The House adjourned at Twenty minutes past six of the Clock to meet again at Nine of the Clock. on Saturday the 22nd July 1978